ಓ.ಎಸ್. 69/2016
ಪಿ.ಡಬ್ಲ್ಯೂ –1

<u>ಸಾಕ್ಷಿಯನ್ನು ದಿನಾಂಕ 11.02.2019 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.</u>

<u>ಪಾಟೀ ಸವಾಲುಃ-</u> ಶ್ರೀ ಜಡ್.ಎ. ವಕೀಲರಿಂದ

ದಾವಾ ಸ್ವತ್ತು ಮೂಲತಃ ನನ್ನ ತಂದೆಯು ಖರೀದಿ ಮಾಡಿದ ಸ್ವತ್ತು ಆಗಿರುತ್ತದೆ . ದಾವಾ ಪೂರ್ಣ ಸ್ವತ್ತು ದೊಡ್ಡಪುಟ್ಟಪ್ಪ ಎನ್ನುವವರಿಗೆ ಸರ್ಕಾರದಿಂದ ಮಂಜೂರಾಗಿತ್ತು . ಆ ದಾಖಲೆಗಳು ನನ್ನ ಬಳಿ ಇಲ್ಲ . ಯಾವ ಆಧಾರದ ಮೇರೆಗೆ ದಾವಾ ಸ್ವತ್ತು ಮಂಜೂರಾಗಿತ್ತು ನನಗೆ ಗೊತ್ತಿಲ್ಲ. ಮೂಲತಃ ಮಂಜೂರಾದ ಸ್ವತ್ತಿನ ಅಳತೆ ಗೊತ್ತಿಲ್ಲ. ದಾವಾ ಸ್ವತ್ತು ನಿವೇಶನ ಎಂದು ಮಂಜೂರಾಗಿತ್ತು ಅಥವಾ ಜಮೀನು ಎಂದು ಮಂಜೂರಾಗಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯು ಪ್ರತಿವಾದ ಪತ್ರ ಸಲ್ಲಿಸಿದ ನಂತರ ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ. ಮೂಲ ದಾಖಲೆಗಳು ಕಛೇರಿಗಳಲ್ಲಿ ಸಿಗಬಹುದು . ನನ್ನ ತಂದೆಯು ಸ್ವತ್ತನ್ನು ಖರೀದಿಸುವ ಕಾಲಕ್ಕೆ ಬಂಗಾರಪ್ಪರವರ ಬಳಿ ಇದ್ದ ಯಾವ ಯಾವ ದಾಖಲೆಗಳನ್ನು ನೋಡಿದ್ದರು ನನಗೆ ಗೊತ್ತಿಲ್ಲ. ನಿ.ಪಿ.-6 ರ ಮೂಲ ಪ್ರತಿಯು ನನ್ನ ಸಂಬಂಧಿಕರು ಹಾಕಿದ್ದ ಮತ್ತೊಂದು ದಾವೆಯಲ್ಲಿ ಸಲ್ಲಿಸಿರುತ್ತೇನೆ. ಆ ದಾವೆಯಲ್ಲಿ ನನ್ನ ಸಹೋದರರು ದಾವಾ ಸ್ವತ್ತಿನಲ್ಲಿ ಹಿಸ್ಸೆ ಕೇಳಿರುತ್ತಾರೆ . ನಿ.ಪಿ.-6 ಅನ್ನು ನಾನು ಓದಿರುತ್ತೇನೆ. ನಿ.ಪಿ.-6 ರಲ್ಲಿ ದಾವಾ ಸ್ವತ್ತು ಯಾವ ಸ್ವರೂಪದಲ್ಲಿ ತೋರಿಸಿರುತ್ತಾರೆ ನನಗೆ ಗೊತ್ತಿಲ್ಲ. ಕೃಷಿಗಾಗಿ ಜಮೀನು ಮಂಜೂರಾದರೆ ಭೂ ಪರಿವರ್ತನೆ ಬೇಕಾಗುತ್ತದೆ . ನಿವೇಶನ ಎಂದು ಮಂಜೂರಾದರೆ ಭೂ ಪರಿವರ್ತನೆ ಬೇಕಾಗುವುದಿಲ್ಲ. ದಾವಾ ಸ್ವತ್ತು ಕಂಬಳಿಕೊಪ್ಪದ ಸರ್ವೇ ನಂಬರ್ 6/7 ರಲ್ಲಿರುವ 2 ಎಕರೆ 34 ಗುಂಟೆ ಭಾಗ ಎಂದರೆ ಸರಿ . ಸದರಿ 2 ಎಕರೆ 34 ಗುಂಟೆ ಭೂ ಪರಿವರ್ತನೆ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಿ.ಪಿ.-6 ರಲ್ಲಿ ಸ್ವತ್ತಿನ ಅಗಲದ ಅಳತೆ ಇರುತ್ತದೆ ಉದ್ದದ ಅಳತೆ ಇರುವುದಿಲ್ಲ.

ನಾನು ಈ ಬಗ್ಗೆ ನನ್ನ ತಂದೆಯೊಂದಿಗೆ ವಿಚಾರಿಸಿಲ್ಲ. ನನ್ನ ತಂದೆಯ ಹೆಸರಿಗೆ ಆಗಿನ ಪುರಸಭೆಯಲ್ಲಿ ದಾವಾ ಸ್ವತ್ತಿನ ಖಾತೆ ಆಗಿತ್ತು ಎಂದರೆ ಸರಿ . ಅದರಲ್ಲಿ ಬರೆದಿದ್ದ ಅಳತೆ ನಾನು ನೋಡಿಲ್ಲ. ಸಾಕ್ಷಿಗೆ ಈಗ ದಾವಾ ಸ್ವತ್ತಿನ 5 ಖಾತೆಯ ದೃಢೀಕೃತ ನಕಲುಗಳನ್ನು ತೋರಿಸಿದ್ದು ಅದರಲ್ಲಿ ತನ್ನ ತಂದೆಯ ಹೆಸರನ್ನು ನೋಡಿ ಗುರುತಿಸಿದ್ದು ಸದರಿ ಖಾತೆಗಳನ್ನು ನಿ.ಡಿ.-1 ರಿಂದ 5 ಎಂದು ಗುರುತಿಸಲಾಯಿತು. ಅದರಲ್ಲಿ ಅಳತೆ ಬರೆಯಲಾಗಿದೆ . ಅದರಲ್ಲಿ ತೋರಿಸಿರುವ ಅಳತೆಯ ಬಗ್ಗೆ ಯಾವುದೇ ತಕರಾರು ಇರಲಿಲ್ಲ. ನನ್ನ ತಂದೆಯು 2000 ಇಸವಿಯಲ್ಲಿ ತೀರಿಕೊಂಡರು . 2006 ರವರೆಗೆ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಇತ್ತು . ದಿನಾಂಕ 17-04-2007 ರಂದು ನಾನು ಮತ್ತು ನನ್ನ ಸಹೋದರರು ನಮ್ಮ ಹೆಸರನ್ನು ಸ್ವತ್ತಿನ ಖಾತೆಗೆ ಬದಲಾಯಿಸಿದ ಖಾತೆಯನ್ನು ತೋರಿಸಿದ್ದು ಅದನ್ನು ಸಾಕ್ಷಿಯು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿ.ಡಿ.-6 ಎಂದು ಗುರುತಿಸಲಾಯಿತು. ನಿ.ಡಿ.-6 ರಲ್ಲಿ ಸ್ವತ್ತಿನ ಉದ್ದದ ಅಳತೆಯನ್ನು 275 ಅಡಿಗಳಿಂದ 302 ಅಡಿ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ನಾವು ನೀಡಿದ ಅರ್ಜಿಯ ಪ್ರಕಾರ ಪುರಸಭೆರವರು ನಮ್ಮ ಸ್ವತ್ತನ್ನು ಅಳತೆ ಮಾಡಿ ಅದನ್ನು ದಾಖಲಿಸಿರುತ್ತಾರೆ . ನಾನು ನೀಡಿದ ಅರ್ಜಿಯ ನಕಲು ನನ್ನ ಬಳಿ ಇಲ್ಲ . ನಿ.ಪಿ.-6 ರಲ್ಲಿ 10 ಗುಂಟೆ ಎಂದು ಬರೆದಿಲ್ಲ. ನಮ್ಮ ತಂದೆ ಖರೀದಿಸಿದ ಸ್ವತ್ತು 10 ಗುಂಟೆ ಇತ್ತು ಎಂದು ಯಾವುದೇ ಬರವಣಿಗೆ ಆಗಿಲ್ಲ. ಈಗ ನನ್ನ ಸ್ವತ್ತಿನ ಪೂರ್ವಕ್ಕೆ ಹೊಸನಗರ ರಸ್ತೆ , ಪಶ್ಚಿಮಕ್ಕೆ ಈಗ ಮಾಡಿರುವ ರಸ್ತೆ , ನನ್ನ ಸ್ವತ್ತಿನ ಉತ್ತರ ದಿಕ್ಕಿನಿಂದ ಸಭಾಯತ್ ರವರ ಮನೆಯವರೆಗೆ ಸುಮಾರು 10 ಮನೆಗಳು ಇರಬಹುದು . ಅವುಗಳು ಮೂಲತಃ ಬಂಗಾರಪ್ಪಗೆ ಸೇರಿದ ಸ್ವತ್ತುಗಳು ಆಗಿದ್ದವು . ಈ ಎಲ್ಲಾ ಮನೆಗಳಿಗೆ ನನ್ನ ಮನೆಯ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯು ಮುಖ್ಯ ರಸ್ತೆಯು ಮುಖ್ಯವಾಗಿ ಓಡಾಡುವ ರಸ್ತೆ ಎಂದರೆ ಸರಿಯಲ್ಲ. ಪ್ರತಿವಾದಿಯರು 2010-11 ಇಸವಿಯಲ್ಲಿ ರಸ್ತೆ ಮಾಡಲು ಪ್ರಾರಂಭಿಸಿದರು . ಆ ಸಮಯದಲ್ಲಿ ನಾನು

ನಮ್ಮ ಸ್ವತ್ತಿಗೆ ಬೇಲಿ ಹಾಕಿದೆ . ನಾನು ಹಾಕಿದ ಬೇಲಿಯನ್ನು ಪ್ರತಿವಾದಿಯರು ಕಿತ್ತಿರುತ್ತಾರೆ . ನನ್ನ ಪಕ್ಕದ ಮನೆಗಳ ಜಾಗದಲ್ಲೂ ಸಹ ಅತಿಕ್ರಮ ಮಾಡಿರಬಹುದು . ನಾನು ಆ ಸಮಯದಲ್ಲಿ ಪೋಲೀಸರಿಗೆ ದೂರು ನೀಡಿಲ್ಲ ಹಾಗೂ ಪೋಟೋ ತೆಗೆದಿಲ್ಲ. ನಾನು ಆ ಸಮಯದಲ್ಲಿ ಅಡಚಣೆ ಮಾಡಿಲ್ಲ. ನನ್ನ ಆಕ್ಷೇಪಣೆಯನ್ನು ನಾನು ನಗರಸಭೆಗೆ ಸಲ್ಲಿಸಿದ್ದೆ . 2010-11 ಇಸವಿಯಲ್ಲಿ ನನ್ನ ಸ್ವತ್ತನ್ನು ವಶಕ್ಕೆ ಪಡೆದುಕೊಂಡು ಕಚ್ಚಾ ರಸ್ತೆ ಮಾಡಿದರು .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಕಂಪ್ಯೂಟರೀಕರಿಸಲಾಯಿತು.)

ಓ ಹೇ ಕೇ ಸ ರಿ ಇದೆ

(ಸೈಯದ್ ಅರ್ಫಾತ್ ಇಬ್ರಾಹಿಂ .ಎಂ)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.